ಖ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಹಾಗೂ ಕೈಗೊಳ್ಳಬೇಕಾಗಿರುವ ಕ್ರಮಗಳೇನು? ಕ್ರಮ ತೆಗೆದುಕೊಳ್ಳದಿದ್ದರೆ ಕಾರಣಗಳೇನು?

ಶ್ರೀ ಆರ್.ವಿ.ದೇಶಪಾಂಡೆ (ಸಹಕಾರ ಸಚಿವರು):

ಅ) ನಬಾರ್ಡ್ ಪ್ರಾಂತೀಯ ಕಛೇರಿ, ಬೆಂಗಳೂರು ರವರು ಬೀದರ್ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಪರಿವೀಕ್ಷಣೆಯನ್ನು ದಿ:31.03.2004ರ ಅಂತ್ಯಕ್ಕೆ ಜರುಗಿಸಿದ್ದು, ಈ ಪರಿವೀಕ್ಷಣೆಯ ವರದಿ ರೀತ್ಯಾ ಈ ಬ್ಯಾಂಕಿನ ವ್ಯವಹಾರದಲ್ಲಿ ಕೆಲವು ನ್ಯೂನತೆಗಳು ಜರುಗಿರುವುದು ವರದಿ ರೀತ್ಯಾ ಇಲಾಖೆಯ ಗಮನಕ್ಕೆ ಬಂದಿರುತ್ತದೆ.

ಆ) ಈ ವರದಿಯಲ್ಲಿ ಕ್ಷಾಣಿಸಿರುವ ನ್ಯೂನತೆಗಳ ಬಗ್ಗೆ ಸಹಕಾರ ಸಂಘಗಳ ನಿಬಂಧಕರ ಪತ್ರ ಸಂ: ಸಿಆರ್‌ಡಿ 28 ಕೆಆರ್‌ಎಫ್ 2004–05 ದಿ:23.12.2004 ಮತ್ತು ದಿ: 06.01.2005ರ ಪ್ರಕಾರ ಕ್ರಮ ತೆಗೆದುಕೊಂಡು ಅನುಪಾಲನಾ ವರದಿಯನ್ನು ಸಹಕಾರ ಸಂಘಗಳ ನಿಬಂಧಕರಿಗೆ ಮತ್ತು ನಬಾರ್ಡಿಗೆ ಸಲ್ಲಿಸುವಂತೆ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಬರೆದು ಸೂಚಿಸಲಾಗಿದೆ.

ಇ) ಹೌದು.

ಈ) ಹೌದು.

ಉ) ಈ ಬಗ್ಗೆ ಸದರಿಯವರ ಹಂತದಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.

ಊ) ಬೀದರ್ ಜಿಲ್ಲಾ ಕಿಸಾನ್ ಬಚಾವೋ ಆಂದೋಲನದ ಸಮಿತಿ, ಬೀದರ್ ರವರು ಗೌರವಾನ್ವಿತ ರಾಜ್ಯಪಾಲರಿಗೆ ಹಾಗೂ ಮಾನ್ಯ ಮುಖ್ಯಮಂತ್ರಿಯವರಿಗೆ ಸಲ್ಲಿಸಿರುವ ಮನವಿ ಬಗ್ಗೆ ಮಾಹಿತಿ ಇರುವುದಿಲ್ಲ. ಆದರೆ ಸಹಕಾರ ಸಂಘಗಳ ಜಂಟಿ ನಿಬಂಧಕರು, ಗುಲ್ಬರ್ಗಾ ಪ್ರಾಂತ, ರಾಯಚೂರು ರವರು ದಿ:30.08.2004ರ ಮನವಿಯನ್ನು ಸಹಕಾರ ಸಂಘಗಳ ನಿಬಂಧಕರಿಗೆ ಸಲ್ಲಿಸಿರುತ್ತಾರೆ.

ಋ) ಕ್ರಮದ ಬಗ್ಗೆ ಪರಿಶೀಲಿಸಲಾಗುತ್ತಿದೆ.

1451(1416) ಶ್ರೀ ಮಹಾಗುಂಡಪ್ಪ ಕಲ್ಲಪ್ಪ ಪಟ್ಟಣಶೆಟ್ಟಿ(ಬಾದಾಮಿ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿನ ರಸ್ತೆಗಳ ನಿರ್ಮಾಣದ ಯೋಜನೆ ಸರ್ಕಾರದ ಮಟ್ಟದಲ್ಲಿ ಇದೆಯೇ?

ಆ) ಈ ದಿಸೆಯಲ್ಲಿ ಮನವಿಗಳು ಏನಾದರೂ ಬಂದಿರುತ್ತವೆಯೇ?

ಇ) ಅಗಿದ್ದಲ್ಲಿ ಯಾರಿಂದ ಮನವಿಗಳು ಬಂದಿವೆ ಹಾಗೂ ಆ ಮನವಿಗಳನ್ನು ಎಂದು ಪರಿಗಣಿಸಲಾಗುವುದು?

ಶ್ರೀ ಪ್ರಕಾಶ್ ಭಾ.ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು):

ಅ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಯೋಜನೆ ಸರ್ಕಾರದ ಮಟ್ಟದಲ್ಲಿ ಇಲ್ಲವಾದರೂ ಪ್ರತಿಯೊಂದು ಮಾರುಕಟ್ಟೆ ಸಮಿತಿ ವ್ಯಾಪ್ತಿಯ ಗ್ರಾಮೀಣ ಸಂಪರ್ಕ ರಸ್ತೆ (ಲಿಂಕ್ ರಸ್ತೆಗಳು) ಅಭಿವೃದ್ಧಿಪಡಿಸಲು ಒಂದು ಸಮಿತಿಗೆ ರೂ.50.00 ಲಕ್ಷಗಳ ಮೊತ್ತದ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ನಬಾರ್ಡ್ ಸಹಾಯದ ಆರ್.ಐ.ಡಿ.ಎಫ್ ಅಡಿಯಲ್ಲಿ ಕೈಗೆತ್ತಿಕೊಳ್ಳಲು ಯೋಜಿಸಲಾಗಿದೆ.

ಅಲ್ಲದೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ನಿಧಿಯಿಂದ ಪ್ರಾಂಗಣದ ಹೊರಗಡೆ ಇರುವ ಗ್ರಾಮೀಣ ಸಂಪರ್ಕ ರಸ್ತೆಗಳ ಅಭಿವೃದ್ಧಿಯನ್ನು ನಿಯಮ 60(ಸಿ)ಗಳನ್ವಯ ಸಮಿತಿಯ ಆರ್ಥಿಕ ಪರಿಸ್ಥಿತಿಗನುಗುಣವಾಗಿ ಕೈಗೊಳ್ಳಲಾಗುತ್ತಿದೆ.

ಅ) ಮತ್ತು ಇ) ಮಾನ್ಯ ಶಾಸಕರುಗಳಿಂದ ಹಾಗೂ ಇತರರಿಂದ ಸ್ವೀಕರಿಸಿದ ಮನವಿಗಳನ್ನು ಸೂಕ್ತ ಕ್ರಮಕ್ಕಾಗಿ ಪರಿಶೀಲಿಸಲಾಗುತ್ತಿದೆ.

1452(1713) ಶ್ರೀ ಮಲ್ಲಿಕಾರ್ಜುನ್ ಸಿದ್ದರಾಮಪ್ಪ ಖೂಬ(ಬಸವಕಲ್ಯಾಣ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲಾ ಬಸವಕಲ್ಯಾಣ ತಾಲ್ಲೂಕಿನಾದ್ಯಂತ ಎ.ಪಿ.ಎಂ.ಸಿ. ಅಡಿಯಲ್ಲಿ ಬರುವ ಗ್ರಾಮೀಣ ರಸ್ತೆಗಳ ತುಂಬಾ ದುಸ್ಥಿತಿಯಲ್ಲಿದ್ದು, ಇದರ ಅಭಿವೃದ್ಧಿಗೆ ಸರ್ಕಾರ ಆದೇಶ ನೀಡಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ ಇದುವರೆವಿಗೂ ರಸ್ತೆಯ ದುರಸ್ತಿಗೆ ಯಾವುದೇ ಕ್ರಮ ಕೈಗೊಳ್ಳದೇ ಇರಲು ಕಾರಣವೇನು?

ಇ) ಕೂಡಲೇ ಗ್ರಾಮೀಣ ಭಾಗದ ರಸ್ತೆಗಳ ದುರಸ್ತಿಗೆ ಎ.ಪಿ.ಎಂ.ಸಿ. ಅನುಧಾನದಡಿಯಲ್ಲಿ ಅನುಧಾನ ಮಂಜೂರು ಮಾಡಿ ರಸ್ತೆ ಅಭಿವೃದ್ಧಿಗೊಳಿಸಿ ಜನತೆಗೆ ಅನುಕೂಲ ಮಾಡಿಕೊಡುವುದು ಯಾವಾಗ?

ಶ್ರೀ ಪ್ರಕಾಶ್ ಭಾ.ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು):

ಅ) ಇಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) ಕಾಯ್ದೆಯ ನಿಯಮ 60(ಸಿ) ಅಡಿಯಲ್ಲಿ ಸಮಿತಿಯ ಆರ್ಥಿಕ ಪರಿಸ್ಥಿತಿಗನುಗುಣವಾಗಿ ಗ್ರಾಮೀಣ ಸಂಪರ್ಕ ರಸ್ತೆಗಳನ್ನು ನಿಧಿಯಿಂದ ಅಭಿವೃದ್ಧಿಗೊಳಿಸಲು ಅವಕಾಶವಿರುತ್ತದೆ. ಆದ್ದರಿಂದ ಈ ನಿಯಮದಡಿಯಲ್ಲಿ ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ.

1453(1747) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡ) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪರಸಗಡ ಮತ ಕ್ಷೇತ್ರದ ಗ್ರಾಮಗಳಲ್ಲಿ ಜನಸಂಪರ್ಕ ಸಭೆ ಕೈಗೊಂಡಾಗ ಈ ತಾಲ್ಲೂಕಿನಲ್ಲಿ 2001ರ ಜನಗಣತಿ ಪ್ರಕಾರ ಸರಾಸರಿ ಪ್ರತಿಶತ 73ರಷ್ಟು ಹಳದಿ ಕಾರ್ಡುಗಳ ವಿತರಣೆ ಯಾಗಿದ್ದರೂ ಇನ್ನೂ ಸಾಕಷ್ಟು ಅರ್ಹ ಕುಟುಂಬಗಳು ಹಳದಿ ಪಡಿತರ ಚೀಟಿ ಪಡೆಯುವಲ್ಲಿ ವಂಚಿತರಾಗಿರುವುದು ನಿಜವೇ?

ಆ) ಹಳದಿ ಪಡಿತರ ಚೀಟಿಗಳನ್ನು ಅನರ್ಹ ಫಲಾನುಭವಿಗಳಿಗೆ ವಿತರಣೆಯಾಗಿರುವುದು ಸಹ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಅನರ್ಹ ಫಲಾನುಭವಿಗಳಿಗೆ ಹಂಚಿಕೆಯಾದ ಹಳದಿ ಪಡಿತರ ಚೀಟಿಗಳ ಮರು ಪರಿಶೀಲನೆ ಮಾಡಿ ಅನರ್ಹ ಹಳದಿ ಪಡಿತರ ಚೀಟಿಗಳನ್ನು ರದ್ದುಪಡಿಸಿ ಅರ್ಹ ಕುಟುಂಬಗಳಿಗೆ ಹಂಚುವಲ್ಲಿ ಸರ್ಕಾರದ ಕ್ರಮಗಳೇನು?